ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 3, Nov-Dec, 2022, Pp. 98-105.
©*IIMRD*, Mysuru.
www.iimrd.com

# ವಿಕಲಾಂಗತೆಯ ಸಂಶೋಧನಾ ಆಧಾರಗಳು, ಸಮಸ್ಯೆಗಳು ಹಾಗೂ ಸವಾಲುಗಳ ಕುರಿತು–ಒಂದು ಅಧ್ಯಯನ

**ಡಾ. ಸತೀಶ. ಎ. ಹಿರೇಮಠ***

ಪ್ರಾಂಶುಪಾಲರು, ಕೊಟ್ಟೂರು ಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ.

***ಸಾರಾಂಶ: (Abstract)***

*ಹಲವಾರು ವರ್ಷಗಳಿಂದ ವಿಕಲಾಂಗತೆಯ ಕುರಿತು ಕೈಗೊಂಡ ಅಧ್ಯಯನಗಳ ಪುನರಾವಲೋಕನೆಯ ಮೂಲಕ ದೈಹಿಕ ವಿಕಲಾಂಗತೆ, ಮಾನಸಿಕ ವಿಕಲಾಂಗತೆಗಳಿಗಿರುವ ಸಮಸ್ಯೆಗಳು ಹಾಗೂ ಸವಾಲುಗಳು, ವಿಕಲಾಂಗತೆಯ ಕುರಿತಾದ ಕಾಯ್ದೆ ಕಾನೂನುಗಳು ಹಾಗೂ ಅವುಗಳ ಸದ್ಬಳಕೆಯ ಮೂಲಕ ಸಂವಿಧಾನಬದ್ಧ ಹಕ್ಕನ್ನು ಫಲಾನುಭವಿಗಳಿಗೆ ನೇರವಾಗಿ ಒದಗಿಸುವಲ್ಲಿ ಸಂಬಂಧಿಸಿದ ಇಲಾಖೆಗಳು, ಸಂಘ–ಸಂಸ್ಥೆಗಳು, ಪ್ರಜ್ಞಾವಂತ ಸಮಾಜದ ಜವಾಬ್ದಾರಿ ಹಾಗೂ ಫಲಾನುಭವಿಗಳು ಸ್ವಾಭಿಮಾನದಿಂದ ಬದುಕು ಕಟ್ಟಿಕೊಳ್ಳುವ ಸದಾವಕಾಶವನ್ನು ಒದಗಿಸಿಕೊಡುವ ಕುರಿತು ಈ ಲೇಖನದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ.*

***ಮುಖ್ಯಪದಗಳು: (Keywords)*** *ವಿಕಲಾಂಗತೆ, ಮಾನಸಿಕ ಅಸ್ವಸ್ಥತೆ, ವಿಶ್ವ ಆರೋಗ್ಯ ಸಂಸ್ಥೆ.*

**ಪೀಠಿಕೆ**

ಕಳೆದ ಮೂರು ದಶಕಗಳಲ್ಲಿ ವಿಕಲಾಂಗತೆಯ ಪರಿಕಲ್ಪನೆಯು ವೈಯಕ್ತಿಕ ದುರ್ಬಲತೆಯಿಂದ ಹೆಚ್ಚಾಗಿ ಸಾಮಾಜಿಕ ವಿದ್ಯಮಾನವಾಗಿ ಬದಲಾಗಿದೆ. ಇದು ವ್ಯಕ್ತಿಯ ದೈಹಿಕ ವೈಶಿಷ್ಟಗಳು ಮತ್ತು ಅವನ/ಅವಳು ವಾಸಿಸುವ ಸಮಾಜದ ವೈಶಿಷ್ಟಗಳ ನಡುವಿನ ಪರಸ್ಪರ ಕ್ರಿಯೆಯನ್ನು ಪ್ರತಿಬಿಂಬಿಸುವುದರಿಂದ ವಿಕಲಾಂಗತೆಯು ಒಂದು ಸಂಕೀರ್ಣ ವಿದ್ಯಮಾನವೆಂದರೆ ತಪ್ಪಾಗಲಾರದು. ವಿಕಲಾಂಗರ ಕುರಿತು ಬೇರೆಯದೇ ಅಭಿಪ್ರಾಯವನ್ನು ನಮ್ಮ ಸಮಾಜ ತನ್ನ ಪ್ರತಿಕ್ರಿಯೆಯ ಮೂಲಕ ಬಿಂಬಿಸುತ್ತಲೇ ಬಂದಿದೆ. ವಿಕಲಾಂಗವುಳ್ಳವರು ದುರ್ಬಲರು ಇತರರ ಹಾಗೆ ಇವರು ಕೆಲಸಗಳನ್ನು ಮಾಡಲು ಅಸಮರ್ಥರು ಎಂಬ ಪೂರ್ವಾಗ್ರಹ ಪೀಡಿತ ಭಾವನೆಯೇ ವಿಕಲಾಂಗರು. ಆದರೆ ವೈಜ್ಞಾನಿಕ ಸಂಶೋಧನೆಗಳು ಹಾಗೂ ನೈಜ ದೃಸ್ಟಾಂತಗಳ ಆಧಾರದಲ್ಲಿ ಹೇಳುವುದಾದರೆ ಸದೃಡ ಸರ್ವಾಂಗಗಳನ್ನು ಹೊಂದಿರುವ ವ್ಯಕ್ತಿಯ ಜೊತೆಗೆ ಅಸ್ಟೆ ಸಮರ್ಥವಾಗಿ ಹಾಗೂ ಸರಿಸಮಾನವಾಗಿ ಕಾರ್ಯ ಕೌಶಲತೆಯನ್ನು ಸಾಧಿಸುವ ಛಲ ಹಾಗೂ ಸಾಮರ್ಥ್ಯ ದೈಹಿಕ ವಿಕಲಾಂಗರಿಗೂ ಅದೇರೀತಿ ಪೂರಕ ಸಮಾಜ ದೊರೆತರೆ ಮಾನಸಿಕ ವಿಕಲಾಂಗರೂ

*Please cite this article as: ಡಾ. ಸತೀಶ. ಎ. ಹಿರೇಮಠ.* (2022). ವಿಕಲಾಂಗತೆಯ ಸಂಶೋಧನಾ ಆಧಾರಗಳು, ಸಮಸ್ಯೆಗಳು ಹಾಗೂ ಸವಾಲುಗಳ ಕುರಿತು–ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 98–105.*

ಕೂಡ ಇತರರೊಂದಗೆ ಬೆರೆತು ಗೌರವ ಜೀವನ ಸಾಗಿಸಬಹುದಾಗಿದೆ. ವಿಕಲಾಂಗತೆ ಎಂಬುದು ದೇಹ ಹಾಗೂ ಮನಸ್ಸಿನ ಯಾವುದೇ ಸ್ಥಿತಿಯಾಗಿದ್ದು, ಈ ಸ್ಥಿತಿಯನ್ನು ಹೊಂದಿರುವ ವ್ಯಕ್ತಿಗೆ ಕೆಲವು ಚಟುವಟಿಕೆಗಳನ್ನು ನಿರ್ವಹಿಸಲು ಹಾಗೂ ಅವರ ಸುತ್ತಲಿನ ಪ್ರಪಂಚದೊಂದಿಗೆ ಸಂವಹನ ನೆಡೆಸಲು ಹೆಚ್ಚು ಕಷ್ಟವಾಗುವುದು.

"ಅಂಗವಿಕಲರು" ಎಂಬುದು ಕೆಲವೊಮ್ಮೆ ಇಂದೇ ಜನಸಂಖ್ಯೆಯನ್ನು ಉಲ್ಲೇಖಿಸುತ್ತದೆಯಾದರೂ ಇದು ವಾಸ್ತವವಾಗಿ ವ್ಯಾಪಕ ಶ್ರೇಣಿಯ ಅಗತ್ಯತೆಗಳನ್ನು ಹೊಂದಿರುವ ವೈವಿಧ್ಯಮಯ ಜನರ ಗುಂಪು ಒಂದೇ ರೀತಿಯ ಅಂಗವೈಕಲ್ಯ ಹೊಂದಿರುವ ಇಬ್ಬರು ವ್ಯಕ್ತಿಗಳು ವಿಭಿನ್ನ ಅದೃಶ್ಯ ವಿಕಲಾಂಗತೆ ಎನ್ನುವರು. ನೋಟದಿಂದ ಮರೆ ಮಾಚಲ್ಪಟ್ಟಿರುವ ಮಾನಸಿಕ ಕಾಯಿಲೆಗಳು ಹೆಚ್.ಐ.ವಿ., ಮಧುಮೇಹ. ಕಲಿಕೆಯಲ್ಲಿ ಅಸಮರ್ಥತೆ ಇತ್ಯಾದಿಗೆ ಅದೃಶ್ಯ ವಿಕಲಾಂಗತೆಗಳಾಗಿವೆ.

**ಅಧ್ಯಯನದ ಉದ್ದೇಶಗಳು**

1. ಸಂಶೋಧನೆಗಳ ಆಧಾರದ ಮೇಲೆ ವಿಕಲಾಂಗತೆಗಿರುವ ಕಾರಣಗಳನ್ನು ಗುರುತಿಸುವುದು.
2. ವಿಕಲಾಂಗರಿಗಿರುವ ಸವಾಲುಗಳು ಮತ್ತು ಸಮಸ್ಯೆಗಳನ್ನು ಅರಿಯುವುದು.

**ಸಾಹಿತ್ಯದ ಪುನರಾವಲೋಕನ**

ಮಾನಸಿಕ ಕಾಯಿಲೆಗಳು ಸಹ ಗಮನಾರ್ಹವಾದ ಅಂಗವೈಕಲ್ಯದೊಂದಿಗೆ ಸಂಬಂದ ಹೊಂದಿವೆ ಎಂಬುದು ಎಲ್ಲರೂ ಒಪ್ಪಿಕೊಳ್ಳುವ ಸತ್ಯ. ಪ್ರಪಂಚದ ಸರಿಸುಮಾರು 31% ಅಂಗವೈಕಲ್ಯವು ಮಾನಸಿಕ ಅಸ್ವಸ್ಥತೆಗಳಿಂದ ಕೂಡಿದೆ. ಪ್ರಪಂಚದ ಪ್ರಮುಖ ಹತ್ತು ಅಂಗವೈಕಲ್ಯದ ಕಾರಣಗಳಲ್ಲಿ ಐದು ಕಾರಣಗಳು ಮಾನಸಿಕ ಕಾಯಿಲೆಗಳ ವರ್ಗದಲ್ಲಿವೆ ಎಂದು ಕಂಡುಬಂದಿದೆ. ಅವುಗಳೆಂದರೆ ಮಾನಸಿಕ ಖಿನ್ನತೆ, ಮಧ್ಯವ್ಯಸನಿಗಳು, ಸ್ಕಿಜೋಪ್ರೇನಿಯಾ, ಬೈಪೋಲಾರ್ ಎಫೆಕ್ಟಿವ್ ಡಿಸಾರ್ಡರ್ ಹಾಗೂ ಒಬ್ಸೆಸಿವ್–ಕಂಪಲ್ಸಿವ್ ಡಿಸಾರ್ಡರ್. ವಿಶ್ವ ಆರೋಗ್ಯ ಸಂಸ್ಥೆಯು ತನ್ನ 2001ರ ವರದಿಯಲ್ಲಿ ಅಂಗವೈಕಲ್ಯ ಹೊಂದಾಣಿಕೆಯ ಜೀವನ ವರ್ಷಗಳನ್ನು ಬಳಸಿಕೊಂಡು, ಮಾನಸಿಕ ಕಾಯಿಲೆಗಳ ಒಟ್ಟು ಅಂಗವೈಕಲ್ಯದಲ್ಲಿ 25% ಹಾಗೂ ಒಟ್ಟು ಹೊರೆಯಲ್ಲಿ 16%ರಷ್ಟಿದೆ ಎಂಬ ಕಾರಣಗಳನ್ನು ನೀಡಿದೆ.

ಮನೋವೈದ್ಯಕೀಯ ಅಸ್ವಸ್ಥತೆಗಳು ತಮ್ಮ ಸ್ವಭಾವದ ಕಾರಣದಿಂದ, ದೈಹಿಕ ಕಾಯಿಲೆಗಳಿಗೆ ಹೋಲಿಸಿದರೆ ವಿಭಿನ್ನ ಮಾದರಿಯ ಅಸಾಮರ್ಥ್ಯಗಳನ್ನು ಪ್ರದರ್ಶಿಸುತ್ತವೆ. ಸಾಮಾಜಿಕ ಹಾಗೂ ಕೆಲಸಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿರುವವರಲ್ಲಿ ಮಾನಸಿಕ ಕಾಯಿಲೆಗಳ ಪ್ರಮಾಣ ಹೆಚ್ಚಾಗಿರುವುದು ಕಂಡುಬಂದಿದೆ. ಇತರ ಅಂಗವೈಕಲ್ಯಗಳಂತೆ, ನಿರಾಸಕ್ತ, ನಿರಾಭಿಪ್ರೇರಣೆ, ಸ್ವಯಂನಿಷ್ಕಾಳಜಿ, ಸಂವಹನ ಸಮಸ್ಯೆಗಳು ಹಾಗೂ ನೀರಸ ಆಂತರಿಕ ಕೌಶಲಗಳು ಮಾನಸಿಕ ಅಸಾಮರ್ಥ್ಯದಲ್ಲಿ ಗೋಚರವಾಗುವುದಿಲ್ಲ. ಉದಾಹರಣೆಗೆ ಚಲನಾ ವಿಕಲಾಂಗತೆ ಅಥವಾ ಕುರುಡುತನ ಕೆಲವು ಸಂದರ್ಭದಲ್ಲಿ ದೈಹಿಕವಾಗಿ ಬಲವಾಗಿ ಕಾಣುವುದರಿಂದ ಬಸ್ ಪಾಸಗಳಂತಹ ಅಂಗವೈಕಲ್ಯ ಪ್ರಯೋಜನಗಳನ್ನು ನಿರಾಕರಿಸಿದ ನಿದರ್ಶನಗಳಿವೆ. ಇದು ಕಳಂಕ ಹಾಗೂ ತಾರತಮ್ಯದಿಂದ ಕೂಡಿದ ವಿಚಾರವಾಗಿದೆ.

ಭಾರತದಲ್ಲಿ ಮನೋವೈದ್ಯಕೀಯ ಅಸಾಮರ್ಥ್ಯದ ಕ್ಷೇತ್ರದಲ್ಲಿನ ಸಂಶೋಧನಾ ಉಪಕ್ರಮಗಳು ಸ್ಕೀಜೋಫ್ರೇನಿಯಾದ ಮೇಲೆ ಹೆಚ್ಚು ಆದ್ಯತೆ ನೀಡಿವೆ. ಅದರಲ್ಲಿ ಮುಖ್ಯವಾಗಿ, ಮೌಲ್ಯಮಾಪನಕ್ಕಾಗಿ ಮಾಪಕಗಳ ಅಭಿವೃದ್ಧಿ ಅಥವಾ ಮಾರ್ಪಾಡು ಹಾಗೂ ದೀರ್ಘಕಾಲದ ಮನೋವೈದ್ಯಕೀಯ ಕಾಯಿಲೆಗಳಿಂದ ಬಳಲುತ್ತಿರುವ ವ್ಯಕ್ತಿಗಳಲ್ಲಿ ಅಂಗವೈಕಲ್ಯ ಮಾಪನ ಇವೇ ಎರಡು ಪ್ರಮುಖ ವಿಷಯಗಳಾಗಿವೆ. 1979ಕ್ಕೂ ಮುಂಚೆಯೇ ವಿಗ್ ಮತ್ತು ಇತರರು ಭಾರತೀಯ ಮನೋರೋಗಿಗಳ ಅಂಗವೈಕಲ್ಯವನ್ನು ಅಳೆಯಲು ಮಾಪಕವನ್ನು ಅಭವೃದ್ಧಿಪಡಿಸಿದ್ದಾರೆ. ಆ ಮೂಲಕ ಮನೋರೋಗಿಗಳು (ICD–8) ನರರೋಗಿಗಳಿಗಿಂತ ಹೆಚ್ಚಿನ ಅಂಕಗಳನ್ನು ಪಡೆದಿರುವುದು, ಹೆಚ್ಚಿನ ವೈಯಕ್ತಿಕ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳು ಕಡಿಮೆ ವೈಯಕ್ತಿಕ ಅಂಗವೈಕಲ್ಯ ಹೊಂದಿರುವ ಅಂಕಗಳನ್ನು ಹೊಂದಿರುವವರಿಗಿಂತ ಹೆಚ್ಚಿನ ಚಿಕಿತ್ಸೆಯ ಅವಲಂಬಿತರಾಗಿರುತ್ತಾರೆ ಎಂಬ ಸತ್ಯವನ್ನು ಕಂಡು ಕೊಂಡಿದ್ದಾರೆ.

ತದನಂತರ ಥಾರಾ ಮತ್ತು ರಾಜಕುಮಾರ್ 68 ಸ್ಕಿಜೋಪ್ರೇನಿಯಾ ರೋಗಿಗಳನ್ನು ಆರು ವರ್ಷಗಳ ಕಾಲ ಪ್ರಮಾಣೀಕೃತ ಸಾಧನಗಳನ್ನು ಬಳಸಿಕೊಂಡು ಆರೈಕೆ ಮಾಡಿದರು ನಾಲ್ಕು, ಐದು ಮತ್ತು ಆರು ವರ್ಷಗಳ ಅನುಸರಣೆಯ ಕೊನೆಯಲ್ಲಿ ಮನೋವೈದ್ಯಕೀಯ ಅಸಾಮರ್ಥ್ಯದ ಮೌಲ್ಯಮಾಪನ (Schedule for assessment of psychiatric disability) ಸಾಧನವನ್ನು ಬಳಸಿ, ಮೂರು ವರ್ಷಗಳ ಅಂಗವೈಕಲ್ಯವು ಯಾವುದೇ ಏರಿಳಿತಗಳಿಲ್ಲದೆ ಸ್ಥಿರವಾಗಿರುತ್ತದೆ ಹಾಗೂ ಹೆಚ್ಚಿನ ಅಂಗವೈಕಲ್ಯವು ಔದ್ಯೋಗಿಕ ಕಾರ್ಯನಿರ್ವಹಣೆಯ ಕ್ಷೇತ್ರದಿಂದಲೇ ಕಾಣಿಸಿಕೊಂಡಿದೆ ಎಂದು ಅವರು ಕಂಡುಕೊಂಡರು.

ಶಂಕರ್ ಮತ್ತು ಇತರರು ಸ್ಕಿಜೋಪ್ರೇನಿಯಾದಿಂದ ಬಳಲುತ್ತಿದ್ದ ವಿವಾಹಿತ ರೋಗಿಗಳಲ್ಲಿ ಅಂಗವೈಕಲ್ಯದಲ್ಲಿನ ಲಿಂಗ ವ್ಯತ್ಯಾಸವನ್ನು ವರದಿ ಮಾಡಿದರು. ಇದಕ್ಕಾಗಿ ಇವರು ಸ್ಕಿಜೋಪ್ರೇನಿಯಾದಿಂದ ಬಳಲುತ್ತಿದ್ದ 32 ವಿವಾಹಿತರನ್ನು ಅಧ್ಯಯನಕ್ಕಾಗಿ ಬಳಸಿಕೊಂಡು, ಅಂಗವಿಕಲ ಮೌಲ್ಯಮಾಪನದ ಪರಿಷ್ಕೃತ ಆವೃತ್ತಿಯನ್ನು ಬಳಸಿಕೊಂಡು ಇತರೆ ಸಂಶೋಧನೆಗಳಿಗಿಂತ ಭಿನ್ನವಾಗಿರುವ ಪುರುಷರಿಗಿಂತ ಮಹಿಳೆಯರು ಹೆಚ್ಚು ಅಂಗವಿಕಲರಾಗಿದ್ದಾರೆ ಎಂಬ ವ್ಯತಿರಿಕ್ತವಾದ ಫಲಿತಾಂಶವನ್ನು ನೀಡಿದ್ದಾರೆ.

**ವಿಕಲಾಂಗರ ಸಮಸ್ಯೆಗಳು ಹಾಗೂ ಸವಾಲುಗಳು**

**ಆರೋಗ್ಯ**

- ತಾಯಂದಿರ ಅಪೌಷ್ಟಿಕತೆ ಕಾರಣದಿಂದ ಜನಿಸುವ ಮಗುವಿನ ಅನಾರೋಗ್ಯ ಹಾಗೂ ಅಪಘಾತಗಳಿಂದಾದ ಗಾಯಗಳು ಸೇರಿದಂತೆ ಹೆಚ್ಚಿನ ಸಂಖ್ಯೆಯ ವಿಕಲಾಂಗತೆಯನ್ನು ತಡೆಗಟ್ಟಬಹುದಾಗಿದೆ. ಆದರೆ ಇಂದಿಗೂ ಗ್ರಾಮೀಣ ಭಾಗದಲ್ಲಿ ಆರೋಗ್ಯ ಇಲಾಖೆಯು ಅಪೇಕ್ಷಿತ ರೀತಿಯಲ್ಲಿ ವಿಕಲಾಂಗರಿಗೆ ಸ್ಪಂದಿಸಲು ವಿಫಲವಾಗಿದೆ.
- ಆರೋಗ್ಯ ರಕ್ಷಣೆಗೆ ಸಂಬಂಧಿಸಿದ ಸೂಕ್ತ ಸೌಲಭ್ಯಗಳು ಹಾಗೂ ಪರಿಕರಗಳ ಸಾಂದರ್ಭಿಕ ಅಲಭ್ಯತೆ ಒಂದು ದೊಡ್ಡ ಸಮಸ್ಯೆಯಾಗಿದೆ.

- ಇನ್ನು ಪುನರ್ವಸತಿ ಕೇಂದ್ರಗಳಲ್ಲಿ ಸೂಕ್ತ ಆರೋಗ್ಯ ಸೌಲಭ್ಯಗಳ ಕೊರತೆಯೊಂದಿಗೆ ಕಳಪೆ ತರಬೇತಿ ಪಡೆದು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಕಾರ್ಯಕ್ಷಮತೆಯೂ ಕೂಡ ಪ್ರಶ್ನಾರ್ಥವಾಗಿದೆ.

**ಶಿಕ್ಷಣ**

- ಪ್ರಸ್ತುತ ಚಾಲ್ತಿಯಲ್ಲಿರುವ ಶಿಕ್ಷಣ ವ್ಯವಸ್ಥೆಯು ಒಳಗೊಳ್ಳುವ ಶಿಕ್ಷಣದಿಂದ ಹೊರತಾಗಿದೆ. ಆದ್ದರಿಂದ ಸೌಮ್ಯದಿಂದ ಮಧ್ಯಮ ವಿಕಲಾಂಗತೆಯ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ದಾಖಲಿಸುವುದು ಒಂದು ಸವಾಲಾಗಿದೆ.
- ವಿಶೇಷ ಶಾಲೆಗಳ ಲಭ್ಯತೆ, ಶಾಲೆಗಳಲ್ಲಿ ಪ್ರವೇಶ ಲಭ್ಯತೆ, ವಿಕಲಾಂಗರಿಗೆ ಶೈಕ್ಷಣಿಕ ಸಾಮಾಗ್ರಿಗಳ ಲಭ್ಯತೆ ಹಾಗೂ ವಿಶೇಷ ಶಿಕ್ಷಣದಲ್ಲಿ ಪರಿಣಿತಿಯನ್ನು ಪಡೆದ ಶಕ್ಷಕರ ಲಭ್ಯತೆಗೆ ಸಂಬಂಧಸಿದಂತೆ ಸಾಕಷ್ಟು ಸಮಸ್ಯೆಗಳಿವೆ.
- ಇನ್ನು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಕಲಾಂಗರಿಗೆ ಸಿಗಬೇಕಾದ ಮೀಸಲಾತಿ ಸೌಲಭ್ಯವು ಹಲವು ಸಂದರ್ಭಗಳಲ್ಲಿ ಸರಿಯಾಗಿ ದೊರೆಯುತ್ತಿಲ್ಲ.

**ಉದ್ಯೋಗ**

- ವಿಕಲಾಂಗರು ಉತ್ಪಾದಕ ಕೆಲಸದಲ್ಲಿ ಸಮರ್ಥರಿದ್ದರೂ ಕೂಡ ಸಾಮಾನ್ಯ ಜನಸಂಖ್ಯೆಗಿಂತ ಕಡಿಮೆ ಉದ್ಯೋಗ ದರವನ್ನು ಹೊಂದಿದ್ದಾರೆ.
- ಖಾಸಗಿ ವಲಯದಲ್ಲಂತೂ ವಿಕಲಾಂಗರ ಅಂಕಿ ಅಂಶಗಳನ್ನು ಅವಲೋಕಿಸಿದಾಗ ಇನ್ನೂ ಪರಿಸ್ಥಿತಿ ಶೋಚನೀಯವಾಗಿದೆ, ಕಾರಣ ಅಲ್ಲಿ ಕಾರ್ಯ ನಿರ್ವಹಿಸುವ ವಿಕಲಾಂಗರ ಸಂಖ್ಯೆ ಬೆರಳೆಣಿಕೆಯಷ್ಟು.

**ಪ್ರವೇಶ ಮಾರ್ಗಗಳು**

ನಗರ ಸಾರಿಗೆ, ಬಸ್ ನಿಲ್ದಾಣಗಳು, ಹೋಟೆಲ್‌ಗಳು, ಆಸ್ಪತ್ರೆಗಳು, ಔಷಧ ಅಂಗಡಿಗಳು, ಸಿನೆಮಾ ಹಾಲ್‌ಗಳು, ಸಂತೋಷ ಕ್ಲಬ್‌ಗಳು ಶಾಲಾ ಕಾಲೇಜುಗಳ ಕಟ್ಟಡಗಳಲ್ಲಿ ವಿಕಲಾಂಗರ ಸುಗಮ ಪ್ರವೇಶ ಹಾಗೂ ನಿರ್ಗಮನದ ವ್ಯವಸ್ಥೆಗಳು ವಿಕಲಾಂಗರಿಗೆ ಸವಾಲಾಗಿದೆ.

**ತಾರತಮ್ಯ ಹಾಗೂ ಸಾಮಾಜಿಕ ಬಹಿಷ್ಕಾರ**

- ವಿಕಲಾಂಗರ ಬಗ್ಗೆ ಅವರ ಕುಟುಂಬದವರ ಮನೋಭಾವ ಹಾಗೂ ಸ್ವತಃ ವಿಕಲಾಂಗರ ಮನೋಭಾವವು ಅವರನ್ನು ಸಮುದಾಯ ಅಥವಾ ಉದ್ಯೋಗಗಳಲ್ಲಿ ತೊಡಗುವುದನ್ನು ತಡೆಯುತ್ತದೆ.
- ವಿಭಿನ್ನ ಸಾಮರ್ಥ್ಯವುಳ್ಳ ಜನರು ದೈನಂದಿನ ಜೀವನದಲ್ಲಿ ಸಾಕಷ್ಟು ತಾರತಮ್ಯವನ್ನು ಅನುಭವಿಸುತ್ತಾರೆ, ಅಲ್ಲದೇ ಮಾನಸಿಕ ಅಸ್ವಸ್ಥತೆ ಅಥವಾ ಬುದ್ದಮಾಂದ್ಯತೆಯಿಂದ ಬಳಲುತ್ತಿರುವ

ಜನರು ಸಮಾಜದಿಂದ ಕೆಟ್ಟ ಕಳಂಕವನ್ನು ಎದುರಿಸುತ್ತಾರಲ್ಲದೇ ತೀರ್ವತರವಾದ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗುತ್ತಾರೆ.

**ಅಸಮರ್ಪಕ ದತ್ತಾಂಶ ಹಾಗೂ ಅಂಕಿ ಸಂಖ್ಯೆಗಳು**

ಅಸಮರ್ಪಕ ದತ್ತಾಂಶ ಹಾಗೂ ಸೂಕ್ತ ಅಂಕಿ ಅಂಶಗಳ ಕೊರತೆಯ ಕಾರಣದಂದ ನಿಜವಾದ ವಿಕಲಾಂಗರೂ ಕೂಡ ಸಿಗಬೇಕಾದ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಇಲ್ಲಿ ವಿಕಲಾಂಗರ ನಿಖರ ದತ್ತಾಂಶ ಸಂಗ್ರಹಣೆ ಹಾಗೂ ವಿಕಲಾಂಗಿತರನ್ನು ಅಳೆಯುವ ಪ್ರಮುಖ ಸಮಸ್ಯೆಗಳೆಂದರೆ

1. ವಿಕಲಾಂಗತೆಯನ್ನು ವಾಖ್ಯಾನುಸುವಲ್ಲಿ ಸಮಸ್ಯೆ.
2. ವಿಭಿನ್ನ ಉದ್ದೇಶಗಳಿಗೆ ವಿಭಿನ್ನ ಅಂಗವೈಕಲ್ಯ ಮಾಹಿತಿ ಅಗತ್ಯವಿದ್ದಾಗ ನಿಖರ ಮಾಹಿತಿ ಕೊರತೆ ಸಮಸ್ಯೆ.

**ನೀತಿಗಳು ಹಾಗೂ ಯೋಜನೆಗಳ ಕಳಪೆ ಅನುಷ್ಠಾನ**

ನೀತಿಗಳು ಹಾಗೂ ಯೋಜನೆಗಳ ಕಳಪೆ ಅನುಷ್ಠಾನದ ಕಾರಣದಿಂದ ಸಾಕಷ್ಟು ವಿಕಲಾಂಗರು, ವಿಕಲಾಂಗರ ಪಟ್ಟಿಯಲ್ಲಿ ಸೇರ್ಪಡೆಯಾಗದೇ ದೊರೆಯಬೇಕಾದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ, ಅಂಗವಿಕಲರ ಸಬಲೀಕರಣಕ್ಕಾಗಿ ಇರುವ ನೀತಿಗಳು ಹಾಗೂ ಯೋಜನೆಗಳ ಅಸಮರ್ಪಕ ನಿರ್ವಹಣೆಯೂ ಕೂಡ ವಿಕಲಾಂಗರಿಗೆ ಒಂದು ಸವಾಲಾಗಿದೆ.

**ವಿಕಲಾಂಗರ ಸಮಸ್ಯೆಗಳ ನಿರ್ಮೂಲನೆ ಹಾಗೂ ಸೌಲಭ್ಯಗಳ ಸಮರ್ಪಕ ಅನುಷ್ಠಾನಕ್ಕೆ ಅನುಸರಿಸಬೇಕಾದ ಮಾರ್ಗೋಪಾಯಗಳು:**

**ವಿಕಲಾಂಗತೆ ತಡೆಗಟ್ಟುವಿಕೆ**

- ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳನ್ನು ಆರೋಗ್ಯ ತಪಾಸಣೆಗೆ ಒಳಪಡಿಸುವ ಮೂಲಕ ತಡೆಗಟ್ಟುವ ಆರೋಗ್ಯ ಕಾರ್ಯಕ್ರಮಗಳನ್ನು ಬಲಪಡಿಸಬೇಕು.
- ಕೇರಳ ಸರಕಾರವು ಈ ದಿಸೆಯಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಸಮಗ್ರ ನವಜಾತ ಸ್ಕ್ರೀನಿಂಗ್ (CNS) ಕಾರ್ಯಕ್ರಮದ ಮೂಲಕ ಶಿಶುಗಳಲ್ಲಿರುವ ಕೊರತೆಗಳನ್ನು ಪ್ರಾರಂಭದಲ್ಲಿಯೇ ಗುರುತಿಸಿ ಆ ರಾಜ್ಯವು ವಿಕಲಾಂಗತೆಯ ಭಾರದ ಹೊರೆಯನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ.

**ಅರಿವು ಮೂಡಿಸುವುದು**

- ವಿಕಲಚೇತನರು ಹಾಗೂ ಸಮಾಜದ ಮಧ್ಯ ಸಮನ್ವಯ ಸಾಧಿಸುವ ಅರಿವು ಕಾರ್ಯಕ್ರಮಗಳ ಮೂಲಕ ಅಂಗವೈಕಲ್ಯತೆಯ ಕಳಂಕವನ್ನು ಹೋಗಲಾಡಿಸುವುದು.
- ವಿವಿಧ ಬಗೆಯ ಅಸಾಮರ್ಥ್ಯಗಳ ಬಗ್ಗೆ ಜಾಗೃತಿ, ಅಭಿಯಾನಗಳ ಮೂಲಕ, ಬೀದಿನಾಟಕಗಳ ಮೂಲಕ ಜನರಲ್ಲಿ ಅರಿವು ಮೂಡಿಸುವ ಕಾರ್ಯ ಮಾಡುವುದು.

- ಅಂಗವಿಕಲರ ಯಶಸ್ಸಿನ ಕಥೆಗಳನ್ನು, ದೃಷ್ಟಾಂತಗಳನ್ನು ಜನರ ಮುಂದಿಟ್ಟು ವಿಕಲಾಂಗರ ಕುರಿತು ಜನಸಾಮನ್ಯರಲ್ಲಿ ಸಕಾರಾತ್ಮಕ ಮನೋಭಾವನೆಯನ್ನು ಬೆಳೆಸುವುದು.

**ಉದ್ಯೋಗಾವಕಾಶಗಳು**

- ವಿಕಲಾಂಗ ವಯಸ್ಕರರಿಗೆ ಉದ್ಯೋಗಯೋಗ್ಯ ಕೌಶಲಗಳೊಂದಿಗೆ ಸಬಲೀಕರಣದ ಅಗತ್ಯವಿದೆ.
- ಖಾಸಗೀ ವಲಯದಲ್ಲಿಯೂ ಕೂಡ ವಿಕಲಾಂಗರಿಗೆ ಸೂಕ್ತ ಪ್ರಮಾಣದಲ್ಲಿ ಮೀಸಲಾತಿಯನ್ನು ನೀಡಿ ಅದರ ವ್ಯಾಪಕ ಅನುಷ್ಠಾನಗೊಳಿಸುವುದು ಹಾಗೂ ವಿಕಲಾಂಗರಿಗೆ ಲಭ್ಯವಿರುವ ಉಗ್ಯೋಗಾವಕಾಶಗಳನ್ನು ಮೀಸಲಾತಿಗನುಗುಣವಾಗಿ ಕಾಲಕಾಲಕ್ಕೆ ಭರ್ತಿ ಮಾಡಲು ಶ್ರಮವಹಿಸುವುದು.

**ಭವಿಷ್ಯದ ನಿರ್ದೇಶನಗಳು ಹಾಗೂ ತೀರ್ಮಾನಗಳು**

- ವಿಕಲಾಂಗರನ್ನು ನೋಡಿಕೊಳ್ಳುವ ಮತ್ತು ಅವರಿಗೆ ಸಲ್ಲಬೇಕಾದ ಸೌಲತ್ತುಗಳನ್ನು ಪಡೆಯುವ ಪ್ರಧಾನ ಜವಾಬ್ದಾರಿ, ಕುಟುಂಬದ ಮೇಲಿದೆ ಎಂಬುದನ್ನು ನಾವು ಮರೆಯಬಾರದು.
- ಅಂಗವಿಕಲರ ಧ್ವನಿಯನ್ನು ಸರಕಾರ ಗುರುತಿಸಬೇಕು.
- ಮಾನಸಿಕ ಅಸಮರ್ಥರಿಗೆ ಮತ್ತು ಅವರ ಪ್ರತಿನಿಧಿಗಳಿಗೆ ಸಂಘಟನೆಗಳನ್ನು ರಚಿಸಲು, ಸೂಕ್ತ ಅನುದಾನ ಒದಗಿಸಲು ಪ್ರೋತ್ಸಾಹ ಹಾಗೂ ಸಹಾಯ ಅತ್ಯಗತ್ಯವಾಗಿದೆ.
- ವೃತ್ತಿಪರರ ಮನೋಭಾವನೆ ಬದಲಾಗಬೇಕಿದೆ.
- ಅಂಗವೈಕಲ್ಯ ಸೇವೆಗಳು ಹಾಗೂ ವಿತರಿಸಲಾದ ಪ್ರಯೋಜನೆಗಳ ಸಂಘಟಿತ ಮೇಲ್ವಿಚಾರಣೆ ಅತ್ಯಗತ್ಯವಾಗಿದೆ.
- ಅಂಗವೈಕಲ್ಯ ಹಾಗೂ ಮನೋವೈದ್ಯಕೀಯ ಅಸ್ವಸ್ಥತೆಗಳಿಗೆ ಸಂಬಂಧಿಸಿದ ಅಂಶಗಳ ಕುರಿತು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

**ಉಪಸಂಹಾರ**

ಸಾಮಾನ್ಯರಿಗಿಂತ ಭಿನ್ನವಾದ ಅಂತರ್‌ದೃಷ್ಟಿಕೋನ ದೈಹಿಕ, ಮಾನಸಿಕ ಸೂಕ್ಷ್ಮಮತಿಯುಳ್ಳ ಮತ್ತು ಬೌದ್ಧಿಕ ಸವಾಲುಗಳನ್ನು ಎದುರಿಸುತ್ತಿರುವ ಆಧುನಿಕ ಜಗತ್ತಿನ ಕ್ರಿಯಾಶೀಲ ಮಾನವ ಸಮಾಜದ ಒಂದು ವರ್ಗವು, ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರದಲ್ಲಿನ ಒತ್ತಡದ ಕಾರಣದಿಂದಾಗಿ ಹಾಗೂ ಗ್ರಾಮೀಣ ಭಾಗದಲ್ಲಿ ಸೂಕ್ತ ಸಂದರ್ಭದಲ್ಲಿ ದೊರೆಯದ ವೈದ್ಯಕೀಯ ಸೌಲಭ್ಯಗಳ ಹಾಗೂ ಪರಿಕರಗಳ ಅಲಭ್ಯತೆಯಿಂದಾಗಿ ವಿಕಲಾಂಗತೆಯಂತಹ ಸುಳಿಗೆ ಸಿಲುಕಿದೆ. ಇಂದಿಗೂ ಮಾನವ ಕುಲಕ್ಕೆ ಒಂದು ದೊಡ್ಡ ಸವಾಲಾಗಿದೆ. ಈ ಸವಾಲನ್ನು ಸವಾಲಾಗಿ ಸ್ವೀಕರಿಸಿ ಅದನ್ನು ತಡೆಗಟ್ಟಲು ಸರಕಾರದ ಜೊತೆಗೆ ಸಂಘ ಸಂಸ್ಥೆಗಳು ಹಾಗೂ

ಪ್ರಜ್ಞಾವಂತ ನಾಗರಿಕ ಸಮಾಜ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಿದಾಗ ಮಾತ್ರ ನಿಜವಾದ ಮಾನವತೆಗೊಂದು ಅರ್ಥವಿದೆ. ಈ ಲೇಖನವನ್ನು ಓದಿ ವಿಕಲಾಂಗರ ಸಹಾಯಕ್ಕೆ ನಿಲ್ಲುವವರಿಗೊಂದು ನನ್ನ ಸಲಾಂ.

**ಪರಾಮರ್ಶನ ಗ್ರಂಥಗಳು**


- Choudhry PK, Deka K, Chetia D. Disability associated with mental disorders. Indian J Psychiatry. 2006; 48:95–101. [PMC free article] [PubMed] [Google Scholar]
- Gururaj GP, Math SB, Reddy JY, Chandrashekar CR. Family burden, quality of life and disability in obsessive compulsive disorder: An Indian perspective. J Postgrad Med. 2008;54:91–7. [PubMed] [Google Scholar]
- India Go. Census 2001/Metadata. In: Affairs MoH, editor. New Delhi: The Registrar General & Census Commissioner, India, New Delhi-110011; 2001. Census of India:
  Meta Data.censusindia.gov.in/Metadata/Metada.htm.
- Kumar SG, Das A, Bhandary PV, Soans SJ, Kumar HN, Kotian MS. Prevalence and pattern of mental disability using Indian disability evaluation assessment scale in a rural community of Karnataka. Indian J Psychiatry. 2008;50:21–3. [PMC free article] [PubMed] [Google Scholar]
- Krishnadas R, Moore BP, Nayak A, Patel RR. Relationship of cognitive function in patients with schizophrenia in remission to disability: A cross-sectional study in an Indian sample. Ann Gen Psychiatry. 2007;30:6–19. [PMC free article] [PubMed] [Google Scholar]
- Shankar R, Kamath S, Joseph AA. Gender differences in disability: A comparison of married patients with schizophrenia. Schizophr Res. 1995;16:17–23. [PubMed] [Google Scholar]
- Srinivasa Murthy R, Kishore Kumar KV, Chisholm D, Thomas T, Sekar K, Chandrashekari CR. Community outreach form untreated schizophrenia in rural India: A follow-up study of symptoms, disability, family burden and costs. Psychol Med. 2005;35:341–51. [PubMed] [Google Scholar]
- Shukla N, Mishra SK. Researches in the Field of Education and Welfare of Children with Multiple Disabilities in India. In: Research Paper. New Delhi. Journal of Special Education in the Asia Pacific 1. 2005;3-13.

- Sreeraj Konadath SC, Jayaram G, Sandeep M, Mahima G, Shreyank PS. Prevalance of Communication Disorders in a Rural Population of Republic of India. J Health Sci. 2013;3(2):OA41–49.
- Tharoor H, Chauhan A, Sharma PS. A cross-sectional comparison of disability and quality of life in euthymic patients with bipolar affective or recurrent depressive disorder with and without comorbid chronic medical illness. Indian J Psychiatry. 2008;50:24–9. [PMC free article] [PubMed] [Google Scholar]
- Thara R, Rajkumar S. Nature and course of disability in schizophrenia. Indian J Psychiatry. 1993; 35:33–5. [PMC free article] [PubMed] [Google Scholar]
- Thirthalli J, Venkatesh BK, Kishorekumar KV, Arunachala U, Venkatasubramanian G, Subbakrishna DK, et al. Prospective comparison of course of disability in antipsychotic-treated and untreated schizophrenia patients. Acta Psychiatr Scand. 2009;119:209–17. [PubMed] [Google Scholar]
- Thirthalli J, Venkatesh BK, Naveen MN, Venkatasubramanian G, Arunachala U, Kishore Kumar KV, et al. Do antipsychotics limit disability in schizophrenia? A naturalistic comparative study in the community. Indian J Psychiatry. (In Press) [PMC free article] [PubMed] [Google Scholar].